ಪದವಿ ಪೂರ್ವ ಶಿಕ್ಷಣ ಇಲಾಖೆ

KM 5

# ದ್ವಿತೀಯ ಪಿ.ಯು.ಸಿ. ಪೂರ್ವಸಿದ್ಧತಾ ಪರೀಕ್ಷೆ 2022-23

ದಿನಾಂಕ : 23-01-2023
ವೇಳೆ : ಬೆಳಗ್ಗೆ 10.15 ರಿಂದ 01.30ರ ವರೆಗೆ

## ವಿಷಯ : ಕನ್ನಡ (01)

ಗರಿಷ್ಠ ಅಂಕಗಳು : 100

### ಅ – ಬಹುಆಯ್ಕೆ ಪ್ರಶ್ನೆ ವಿಭಾಗ

I. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **10X1 = 10**

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು.
   ಅ) ಶೃಂಗಾರ ಆ) ಅರಮನೆ ಇ) ಪ್ರಮದವನ ಈ). ಅಯೋಧ್ಯೆ
2. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು ?
   ಅ) ಗುಹೇಶ್ವರ ಆ) ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ಇ) ಚೆನ್ನಮಲ್ಲಿಕಾರ್ಜುನ ಈ) ಕೂಡಲ ಸಂಗಮದೇವಾ
3. ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದುವರಾರು ?
   ಅ) ಕೀಚಕ ಆ) ದುರ್ಯೋಧನ ಇ) ದುಶ್ಯಾಸನ ಈ) ಸೈಂಧವ
4. ಜಾಲಿಯ ಮರದಂತಿರುವವರು ಯಾರು ?
   ಅ) ದುರ್ಜನರು ಆ) ಸಜ್ಜನರು ಇ) ತತ್ವಜ್ಞಾನಿಗಳು ಈ) ಪಂಡಿತರು
5. 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು ?
   ಅ) ಡಾ॥ ಚಂದ್ರಪ್ಪ ಆ) ಬಸಲಿಂಗಪ್ಪ ಇ) ಡಾ॥ ತಿಮ್ಮಪ್ಪ ಈ) ಡಾ॥ ಶಂಕರಪ್ಪ
6. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು ?
   ಅ) ಸೀತಾ ಆ) ನಿಶಾಶರ್ಮಾ ಇ) ಪ್ರೇಮಿಯಾ ಈ) ಕಮಲಾ
7. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕ ಸಾಕ್ಷಿಯಾಗಿತ್ತು ?
   ಅ) ಬಂಗಾರದ ಲೋಟ ಆ) ತಾಮ್ರದ ಲೋಟ ಇ) ಬೆಳ್ಳಿಲೋಟ ಈ) ಹಿತ್ತಾಳೆ ಲೋಟ
8. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
   ಅ) ಜಬ್ಬಾರ ಆ) ನಾಗರಾಜ ಇ) ದುರ್ಗಪ್ಪ ಈ) ಪ್ರಕಾಶ
9. ಮುನ್ಸಿಪಾಲಿಟಿ ಪ್ರೆಸಿಡೆಂಟ್ ಹೆಸರೇನು ?
   ಅ) ಖಾನಸಾಹೇಬ ಆ) ಅಬ್ಬಾಸ ಇ) ಶಿವೇಗೌಡರು ಈ) ತಿಪ್ಪಣ್ಣ
10. ದುರ್ಗಪ್ಪನ ಪ್ರಕಾರ ತಲ್ಲೆ ಡಿಪಾರ್ಟಮೆಂಟ್ ಯಾವುದು
   ಅ) ಪಿಡಬ್ಲುಡಿ ಆ) ಟೆಲಿಫೋನ್ ಇ) ಕರೆಂಟ್ ಈ) ಅರಣ್ಯ ಇಲಾಖೆ

ಆ.) 11. ಹೊಂದಿಸಿ ಬರೆಯಿರಿ. **5X1 = 5**

| | |
|---|---|
| ಅ. ಹರಹರಾ ಶ್ರೀ ಚೆನ್ನಸೋಮೇಶ್ವರಾ | 1. ದ.ರಾ.ಬೇಂದ್ರೆ |
| ಆ. ಪ್ರೊ. ಟಿ. ಯಲ್ಲಪ್ಪ | 2. ಒಮ್ಮೆ ನಗುತ್ತೇವೆ |
| ಇ. ಉತ್ತಮರ ಗೆಳೆತನ | 3. ಮಲೆಗೆರೆ ಸೋಮನಾಥ |
| ಈ. ಅಂಬಿಕಾತನಯದತ್ತ | 4. ಹತ್ತಿ... ಚಿತ್ತ... ಮತ್ತು |
| ಉ. ಪ್ರೊ. ಬಿ ಸುಕನ್ಯಾ ಮಾರುತಿ | 5. ಮಕ್ಕಳ ಬಂಗಾರ |
| | 6. ಬಸವಣ್ಣ |

ಇ.) 12. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5X1 = 5**
**(ಆಣ್ಣಾಮಲೈ, ಸಿಂಹಬಾಲದ ಕೋತಿ, ಹೈದರಾಬಾದ, ಚಂದ್ರಭವನ, ಮನೋರಮೆ)**

ಅ. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ________
ಆ. ಎ. ಆರ್. ಕೃಷ್ಣಶಾಸ್ತ್ರಿಗಳು ______ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
ಇ. ಕಲಾಂ ಅವರು ______ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು.
ಈ. ಮುದ್ದಣ್ಣ ಅರಮನೆಯಿಂದ ಬರುತ್ತಿರುವುದನ್ನು ನಿಂತು ನೋಡಿದವರು ______
ಉ. ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರು ________

### ಆ – ವಿಭಾಗ

II ಅ.) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **4X2 = 8**

13. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ ?
14. ಯಾರಿಗೆ ಷಡ್ರಸಾನ್ನವನ್ನಿಕ್ಕಿ ಉಪಯೋಗವಿಲ್ಲ? ಏಕೆ ?
15. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ.?
16. ಮೊಮ್ಮಗಳ ಆತುರಕ್ಕೆ ಮುದುಕ ಏನೆಂದುಕೊಂಡಳು ?
17. ಕವಯಿತ್ರಿ ಮುಗಿಲತ್ತ ಕೈ ಚಾಚಿ ಏಕೆ ನಿಂತಿದ್ದಾರೆ ?

ಆ.) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **3X2 = 6**

18. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು ?
19. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ ?
20. ಮನೋರಮ ಕತೆ ಹೇಳೆಂದು ಕೇಳಲು ಕಾರಣವೇನು ?
21. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ ?

ಇ.) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. **4X2 = 8**

22. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
23. ಫಾರಸ್ಟ್ ಡಿಪಾರ್ಟಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?
24. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ ?
25. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಮುಟ್ಟಯ್ಯ ಹೇಳಿದನು ?
26. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?

### ಇ – ವಿಭಾಗ

III ಅ.) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **2X3 = 6**

27. "ಅಸಾಧ್ಯಮಪ್ಪ ಮರುವಕ್ಕಮಿಲ್ಲ"
28. "ಕಲಿ ಭೀಮನೇ ಮಿಡುಕುಳ್ಳ ಗಂಡನು"
29. "ಮುಳುಗಿರಲಿ ಮುಪ್ಪ ಚಿಂತನರಿ"

P.T.O

ಆ.) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1X3 = 3**

30. ನಮ್ಮ ಭಾಷೆಯಲ್ಲಿ ಓದಿದ್ರೆ ಮೈಗೆ ಹತ್ತುವುದು.
31. ವಿಜ್ಞಾನದ ಆದಿಪಾಯವೇ ಪ್ರಶ್ನೆ ಕೇಳುವುದು,

ಇ.) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1X3 = 3**

32. ನಮ್ಮ ಕಡ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ
33. ಡ್ರೈವರಣ್ಣ ಎತ್ಲಾಗ ಹೋದ ಇಲ್ಲೇ ಇದ್ದನಲ್ಲ !

ಈ – ವಿಭಾಗ

IV ಅ.) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **2X4 = 8**

34. ರಕ್ಷಿಸಬೇಕಾದವರೆ ಭಕ್ಷಕರಾದರೇ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ. ?
35. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.
36. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ ?
37. ಗರತಿ ತವರಿಗೆ ಏನೆಂದು ಹರಸುತ್ತಾಳೆ ?

ಆ.) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **1X4 = 4**

38. ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು ?
39. ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ ?
40. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ಇ.) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **1X4 = 4**

41. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ ? ವಿವರಿಸಿ.
42. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿಹೋಗಲು ಕಾರಣಗಳೇನು ?
43. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು ?

ಉ – ವಿಭಾಗ

V ಅ.) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. **1X5 = 5**

44. ರಾಮನಿನಗಲ್ಕಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿ ನಾ
ರಾಮಾಖಿಮಂ ಪಡಿಯೆ ದುರ್ಯಶಃಪಟಹರವಂ

ಅಥವಾ

ಶಿಲುಬೆಗೇರಿದ್ದಾನೆ ಜೀಸಸ್ ಗೋಡೆಯಲ್ಲಿ
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ
ಯಾತನೆಗೂ ನಲ್ವಾತನೇ ನುಡಿವ ಮುಖ ಮುದ್ರೆ
ತೆರೆದಿದೆ
ಎನ್ನುವಂತಿದೆ
ಕೊಲೆಗಡುಕ ಬರಬ್ಬನ ವಕಲತ್ತೂ ನಡೆಸಿದವರೆ,
ಎಡಕೊಬ್ಬ ಬಲಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ,
ಮನ್ನಿಸಲಿ ನಿಮ್ಮನ್ನು ಆ ದೇವರೇ ।

SHINE

ಭಾಷಾಭ್ಯಾಸ

VI ಅ.) ಕೆಳಗಿನ ಪ್ರಶ್ನೆಗಳಲ್ಲಿ ಯವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **6X2 = 12**

45. ಕೆಳಗಿನ ಎರಡು ಪದಗಳಿಗೆ ತದ್ಭವ ರೂಪ ಬರೆಯಿರಿ : ಪರೀಕ್ಷಿಸು, ಅಗ್ನಿ, ಘೂಕ
46. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ. : ಬಟ್ಟೆ, ಹೊಳೆ, ಪಡೆ
47. ಕೆಳಗಿನ ಎರಡು ಪದಗಳಿಗೆ ಕಾಲಸೂಚಕಗಳನ್ನು ಬರೆಯಿರಿ : ಹೋದರು, ಬರುತ್ತಾಳೆ, ನಿಲ್ಲುವುದು
48. ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿರಿ. :ಪಿರಿಯವು, ಧುರದೊಳ್, ಧರ್ಮಜನಿಗೆ
49. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ : ಕಡುಪಾಪ, ಕಿರುಹಾದಿ, ರಸಬಳ್ಳಿ
50. ಕೆಳಗಿನ ಎರಡು ನುಡಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ : ರಾಮಬಾಣ, ಎರಡುಬಗೆ, ಕೈಕೊಡು
51. ಕೆಳಗಿನ ಎರಡು ಪದಗಳ ಧಾತುಗಳನ್ನು ಬರೆಯಿರಿ. : ತಿಂದನು, ಹೋಗುವನು, ಬರೆಯುತ್ತಾನೆ.

ಆ.) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ. **1X5 = 5**

52. ಕನ್ನಡ ಬಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು

**ಅಥವಾ**

ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ

ಇ.) ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. **1X4 = 4**

53. ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಪ್ರಾಚಾರ್ಯರಿಗೊಂದು ಪತ್ರ ಬರೆಯಿರಿ.

**ಅಥವಾ**

ಪರೀಕ್ಷಾ ಸಿದ್ಧತೆಯನ್ನು ಕುರಿತು ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

ಈ.) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ. **1X4 = 4**

54. ಹಾಸಿಗೆ ಇದ್ದಷ್ಟು ಕಾಲುಚಾಚು

**ಅಥವಾ**

ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು.